ಅ) ಪತಿ-ಪತ್ನಿಯರ ಪ್ರಕರಣಗಳಲ್ಲಿ ಹಾಗೂ ಕಪ್ಪು ಹಲಗೆ ಯೋಜನೆಯಡಿ ಕೆಲಸ ಮಾಡುವ ಶಿಕ್ಷಕರ ಬಗ್ಗೆ ಸರ್ಕಾರದ ನೀತಿ ಧೋರಣೆಯನ್ನು ಪಾಲಿಸಬೇಕಾಗಿದ್ದು ಈ ಶಿಕ್ಷಕರುಗಳನ್ನು ವರ್ಗಾಯಿಸಿಲ್ಲ.

ರಾಜ್ಯದಲ್ಲಿ ಸರ್ಕಾರಿ ಶಾಲೆಗಳಲ್ಲಿನ ರಜಾ ದಿನಗಳು

ಶ್ರೀ ಕೆ. ಜಯರಾಮ ಶೆಟ್ಟಿ (ಉಳ್ಳಾಲ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿನ ಸರಕಾರಿ ಶಾಲೆಗಳಿಗೆ ವಾರದ ರಜಾ ದಿನವಾಗಿ ಶನಿವಾರ ಮತ್ತು ರವಿವಾರ ಬಿಟ್ಟು ಇನ್ಯಾವುದಾದರೂ ದಿನವನ್ನು ರಜೆ ಎಂದು ಘೋಷಣೆ ಮಾಡಿದೆಯೇ?

ಹಾಗಿದ್ದಲ್ಲಿ ಅದರ ವಿವರಗಳೇನು?

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಾಗೂ ಉಳ್ಳಾಲ ವಿಧಾನ ಸಭಾ ಕ್ಷೇತ್ರದಲ್ಲಿ ಕೆಲವು ಸರಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಶನಿವಾರ ಮತ್ತು ರವಿವಾರ ಬಿಟ್ಟು ಉಳಿದ ದಿನಗಳಲ್ಲಿ ವಾರದ ರಜಾದಿನವೆಂದು ಘೋಷಿಸಿರುವುದು ಸರಕಾರದ ಗಮನಕ್ಕೆ ಬಂದಿದೆಯೇ;

ಇ) ಹೀಗೆ ರಜಾ ಘೋಷಣೆ ಮಾಡಲು ಅನುಮತಿಸಿರುವ ಅಧಿಕಾರಿ ವರ್ಗ ಯಾವುದು; ಅದಕ್ಕೆ ಸರಕಾರದ ಪೂರ್ವ ಅನುಮತಿಯನ್ನು ಪಡೆಯಲಾಗಿದೆಯೇ;

ಈ) ನಿಗದಿತ ರಜಾ ದಿನಗಳನ್ನು ಬಿಟ್ಟು ಇತರ ದಿನವನ್ನು ರಜಾ ದಿನವೆಂದು ಘೋಷಿಸಿರುವ ಮತ್ತು ಅದನ್ನು ಆಚರಣೆಯಲ್ಲಿ ತಂದಿರುವ ಶಾಲೆಗಳ ಹೆಸರುಗಳೇನು;

ಉ) ಶಿಕ್ಷಣ ರಂಗದಲ್ಲಿಯೂ ಇಂಥ ತಾರತಮ್ಯ ಭಾವನೆಗಳಿಗೆ ಅವಕಾಶ ಮಾಡಿಕೊಡುವುದು ಸೂಕ್ತವೆಂದು ಸರಕಾರವು ಭಾವಿಸುತ್ತದೆಯೇ;

ಶ್ರೀ ಹೆಚ್.ಜಿ. ಗೋವಿಂದ ಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಇಲ್ಲ

ಉರ್ದು ಶಾಲೆಗಳಿಗೆ ಮಾತ್ರ ಶುಕ್ರವಾರ ರಜೆ ಹಾಗೂ ಗುರುವಾರ ಅರ್ಧದಿನ ರಜೆ. ಉಳಿದ ದಿನಗಳು ಕೆಲಸದ ದಿನಗಳು.

ಆ) ಹೌದು

ಇ) ಭಾಷಾ ಅಲ್ಪ ಸಂಖ್ಯಾತರ ಶಾಲೆಯ ನಿಯಮದಂತೆ ರಜೆ ಘೋಷಿಸಲಾಗುತ್ತಿದೆ.

ಈ) ಉರ್ದು ಶಾಲೆಗಳಿಗೆ ಮಾತ್ರ ಈ ರೀತಿ ರಜೆ ಘೋಷಿಸಲಾಗುತ್ತಿದೆ.

ಉ) ಭಾಷಾ ಅಲ್ಪ ಸಂಖ್ಯಾತರ ಶಾಲೆಗಳಿಗೆ ಮಾತ್ರ ಹಿಂದಿನಿಂದಲೂ ಈ ರಜೆ ಸೌಲಭ್ಯ ನೀಡಲಾಗಿದೆ.

ವೈದ್ಯಕೀಯ ವಿದ್ಯಾರ್ಥಿಗಳ ಪ್ರವೇಶ

522 - ಶ್ರೀ ಪಿ.ಆರ್. ಪಾಟೀಲ್ (ಗದಗ್) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ವೈದ್ಯಕೀಯ ಮಹಾ ವಿದ್ಯಾಲಯಗಳಿಗೆ ವಿದ್ಯಾರ್ಥಿಗಳ ಪ್ರವೇಶ ಪೂರ್ಣಗೊಳ್ಳುತ್ತದೆಂದು?

ಆ) ಈ ಮಹಾವಿದ್ಯಾಲಯಗಳ ಪ್ರವೇಶ ಕುರಿತು ಸರ್ಕಾರದ ನೀತಿಯೇನು?

ಶ್ರೀ ಎ.ಬಿ. ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) ಆಗಸ್ಟ್ 1995 ರಂದು ಅಂತ್ಯದೊಳಗೆ ಪ್ರವೇಶಗಳನ್ನು ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಆ) 1993ರ ಕರ್ನಾಟಕ ಇಂಜಿನಿಯರಿಂಗ್ ವೈದ್ಯಕೀಯ ದಂತ ಕಾಲೇಜುಗಳ ಪ್ರವೇಶ ನಿಯಮಗಳ ಪ್ರಕಾರ ಪ್ರವೇಶವನ್ನು ಮಾಡಲಾಗುವುದು.

ಪ್ರವೇಶ ನೀತಿಯ ಬಗ್ಗೆ ಹಾಲಿ ಇರುವ ನಿಯಮಗಳ ಅಡಿ ಇರುವ ತೊಂದರೆಗಳ ಬಗ್ಗೆ ರಾಜ್ಯದ ಅಭಿಪ್ರಾಯ ಕೋರಿ ಸರ್ವೋಚ್ಚ ನ್ಯಾಯಾಲಯ ದಿನಾಂಕ 31-7-95 ರವರೆಗೆ ಮನವಿ ಸಲ್ಲಿಸಲು ಅವಕಾಶ ನೀಡಿತ್ತು. ಈ ಬಗ್ಗೆ ಸರ್ಕಾರವು ರಾಜ್ಯದ ಎಲ್ಲಾ ವೈದ್ಯಕೀಯ ಕಾಲೇಜುಗಳಿಗೆ ಏಕ ರೀತಿಯ ಪ್ರವೇಶ ನೀತಿಯನ್ನು ಅಳವಡಿಸುವ ಬಗ್ಗೆ ರಾಜ್ಯ ಸರ್ಕಾರವು ಅಭಿಪ್ರಾಯ ಸಲ್ಲಿಸಿದೆ. ಈ ಬಗ್ಗೆ ಸರ್ವೋಚ್ಚ ನ್ಯಾಯಾಲಯವು ನೀಡಿರುವ ತೀರ್ಮಾನಕ್ಕನುಗುಣವಾಗಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ರಾಷ್ಟ್ರೀಯ ಕ್ರೀಡೆಗಳಿಗಾಗಿ ಬೆಂಗಳೂರಿನಲ್ಲಿ ಆಗಬೇಕಾದ ಸಿದ್ಧತೆಗಳು

134 - ಶ್ರೀ ಆರ್. ಕೃಷ್ಣಪ್ಪ (ಜಯಮಹಲ್) : ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರಿನಲ್ಲಿ 1996ನೇ ಜನವರಿಯಲ್ಲಿ ನಡೆಯಲಿರುವ ರಾಷ್ಟ್ರೀಯ ಕ್ರೀಡೆಗಳಿಗಾಗಿ ಕೈಗೊಂಡಿರುವ ಸ್ಟೇಡಿಯಂ ನಿರ್ಮಾಣದ ಕೆಲಸಗಳ ಪ್ರಗತಿ ಬಗ್ಗೆ ವಿವರ ನೀಡುವುದು.

ಆ) ಕೋರಮಂಗಲದಲ್ಲಿ ಈ ಸಂಬಂಧವಾಗಿ ಕಟ್ಟುತ್ತಿರುವ ಮನೆಗಳು ಯಾವಾಗ ಪೂರ್ಣಗೊಳ್ಳುವುದು?

ಇ) ರಾಜ್ಯ ಸರ್ಕಾರ ರಾಷ್ಟ್ರೀಯ ಕ್ರೀಡೆಗಾಗಿ ಇಲ್ಲಿಯವರೆಗೆ ಖರ್ಚು ಮಾಡಿದ ಹಣವೆಷ್ಟು?

ಈ) ಕೇಂದ್ರ ಸರ್ಕಾರದಿಂದ ಬಂದಿರುವ ಹಣದ ಮೊತ್ತವೆಷ್ಟು?@QUE = I) ರಾಷ್ಟ್ರೀಯ ಕ್ರೀಡೆಗಾಗಿ ಇತರೆ ಸಿದ್ಧತೆಗಳ ಬಗ್ಗೆ ಪೂರ್ಣ ವಿವರ ನೀಡುವುದು.

ಊ) 1996ರಲ್ಲಿ ಅಟ್ಲಾಂಟದಲ್ಲಿ ನಡೆಯಲಿರುವ ಒಲಂಪಿಕ್ಸ್ ಕ್ರೀಡೆಗಳ ಸಂಬಂಧವಾಗಿ ರಾಷ್ಟ್ರೀಯ ಕ್ರೀಡೆಗಳನ್ನು ಮುಂದೂಡದ ಸಾಧ್ಯತೆಗಳಿವೆಯೇ?

ಶ್ರೀ ಅಜಯ ಕುಮಾರ್ ಸರ್ ನಾಯಕ್ (ಯುವಜನ ಸೇವಾ ಮತ್ತು ಕ್ರೀಡಾ ಸಚಿವರು) :

ಅ) ಶ್ರೀ ಕಂಠೀರವ ಕ್ರೀಡಾಂಗಣದ ನವೀಕರಣ

1996ನೇ ಜನವರಿಯಲ್ಲಿ ನಡೆಯಲಿರುವ ರಾಷ್ಟ್ರೀಯ ಕ್ರೀಡೆಗಳಿಗಾಗಿ ಸ್ಟೇಡಿಯಂ ನಿರ್ಮಾಣದ ಕೆಲಸಗಳ ವಿವರಗಳು :

1) ಶ್ರೀ ಕಂಠೀರವ ಕ್ರೀಡಾಂಗಣವನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ವಿಸ್ತರಿಸಲು 8.82 ಕೋಟಿ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ನಿರ್ಮಾಣ ಮಾಡಲು ಕ್ರಮ ಕೈಗೊಂಡಿದ್ದು ಸದರಿ ಕೆಲಸವನ್ನು ಎಸ್.ವಿ.ಇ.ಸಿ. ನಿರ್ಮಾಣ ಸಂಸ್ಥೆಗೆ ಟೆಂಡರ್ ಆಧಾರದ ಮೇಲೆ ವಹಿಸಿಕೊಡಲಾಗಿದೆ. ಸದರಿ ಕಟ್ಟಡಕ್ಕೆ ವೈಲ್ ಪೌಂಡೇಷನ್ ಅಳವಡಿಸಲಾಗಿದ್ದು, ಪೌಂಡೇಸನ್ ಕೆಲವು ಪೂರ್ತಿಗೊಂಡಿದ್ದು, ಪೂರ್ವ ಉತ್ತರ ಮತ್ತು ದಕ್ಷಿಣ ಭಾಗದ ಗ್ಯಾಲರಿ ಕಾಮಗಾರಿ ವಿವಿಧ